ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಸಿಂಧ್ಯಾರವರು ಉತ್ತರ ಕೊಡುತ್ತಾ ಸಾಮಾನ್ಯ ರಿಯಾಯಿತಿ 10 ಪರ್ಸೆಂಟ್ ಕೊಡುತ್ತಿದ್ದೇವೆಂದು ಹೇಳಿದರು. ಆದರೆ 14-1-2004ರಲ್ಲಿ ಹೊರಡಿಸಿದ ತಕ್ಕಂಥ ಸುತ್ತೋಲೆಯಲ್ಲಿ ಸಾಮಾನ್ಯ ರಿಯಾಯಿತಿ ಕೇವಲ 5 ಪರ್ಸೆಂಟ್ ಮಾತ್ರ ಎಂದು ಹೇಳಿದೆ. ಇದು ಸಾಕೇ ? ಇದರಿಂದ ಖಾದೀ ವಸ್ತ್ರವನ್ನು ಹೆಚ್ಚು ಪಾಪ್ಯುಲರ್ ಮಾಡುವುದಕ್ಕೆ ಸಾಧ್ಯವಾಗುತ್ತಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಅವರು ಯಾವ ಸರ್ಕ್ಯುಲರ್ ಕಾಪಿ ಇಟ್ಟುಕೊಂಡಿದ್ದಾರೋ ಅದನ್ನು ನನಗೆ ಕಳುಹಿಸಿಕೊಡಲಿ; ನಾನು ಏನು ಅವರಿಗೆ ಭರವಸೆ ಕೊಟ್ಟಿದ್ದೇನೆಯೋ ಅದರ ಪ್ರಕಾರ ನಡೆದುಕೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ಕಳುಹಿಸಿಕೊಡಿ. ಈಗ ಮಾನ್ಯ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು. (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು). ಈಗ ಹೆಚ್.ಡಿ. ಬಸವರಾಜುರವರ ಪ್ರಶ್ನೆ 335 ನ್ನು ಅವರ ಪರವಾಗಿ ಎನ್. ಯೋಗೀಶ್ ಭಟ್ ರವರು ಕೇಳುತ್ತಾರೆ.

ಕೆ.ಎಸ್.ಐ.ಎಂ.ಸಿ. ಯನ್ನು ಮುಚ್ಚುವ ಬಗ್ಗೆ

57(335) ಶ್ರೀ ಹೆಚ್.ಡಿ. ಬಸವರಾಜು.(ವಿರಾಜಪೇಟೆ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಕೆ.ಎಸ್.ಐ.ಎಂ.ಸಿ. ಯನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ;

ಇ) ಯಾವಾಗ ಮುಚ್ಚುವ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ ;

ಈ) ಇದರಿಂದ ಇಲ್ಲಿಯ ಕಾರ್ಮಿಕ ನೌಕರರು ಬೀದಿಪಾಲಾಗುವುದಿಲ್ಲವೇ ;

ಉ) ಈ ನಿಗಮ ಸ್ಥಾಪನೆಯಾಗಿದ್ದು ಯಾವಾಗ ; ಹಾಗು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿತ್ತು;

ಊ) ನಿಗಮ ಮುಚ್ಚುವ ಕಾರ್ಯದಿಂದ ಇಲ್ಲಿ ನೌಕರರನ್ನು ಬೇರೆ ಇಲಾಖೆಗಳಿಗೆ ಕಳುಹಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; ಅಥವಾ ಇವರನ್ನು ಸ್ವಯಂ ನಿವೃತ್ತಿಗೊಳಿಸಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಸರ್ಕಾರವು ಪಾರದರ್ಶಕತೆ ಕಾಯಿದೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ.

ಇ) ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಈ) ಸ್ವಯಂ ನಿವೃತ್ತಿ ನೀಡಲಾಗುತ್ತಿದೆ.

ಉ) 1984 ಸೆಪ್ಟೆಂಬರ್ ರಾಜ್ಯ ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಸ್ಥಾಪಿಸಲಾಗಿತ್ತು.

ಊ) ನಿಗಮದಿಂದ ಹೊರಗಡೆ ನಿಯೋಜನೆ ಮೇಲಿರುವ ನೌಕರರನ್ನು ಆಯಾ ಇಲಾಖೆಯಲ್ಲಿ ನೇಮಿಸಲು ಪರಿಶೀಲಿಸಲಾಗುತ್ತಿದೆ. ಉಳಿದ ಸಿಬ್ಬಂದಿಗೆ ಸ್ವಯಂ ನಿವೃತ್ತಿ ನೀಡಲಾಗುತ್ತಿದೆ.

ಶ್ರೀ ಎನ್ ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮವನ್ನು ಯಾವ ಕಾರಣಕ್ಕೋಸ್ಕರ ಮುಚ್ಚುವಂತಹ ಸ್ಥಿತಿ ಬಂತು. ಅದರ ಸದುದ್ದೇಶ ಮತ್ತು ಅದರ ಅವಶ್ಯಕತೆ ಇದ್ದರೂ ಕೂಡ ಅದನ್ನು ಮುಚ್ಚುವಂತಹ ನಿರ್ಣಯವನ್ನು ತಾವು ತೆಗೆದುಕೊಳ್ಳುವುದಕ್ಕೆ ಬಂದಿದ್ದೀರಿ. ಕೆಲವೇ ವ್ಯಕ್ತಿಗಳು ಭ್ರಷ್ಟಾಚಾರ ಮಾಡುವುದು ಇತ್ತಾ ಅಥವಾ ಯಾವ ಕಾರಣಕ್ಕೋಸ್ಕರ ಎನ್ನುವುದನ್ನು ತಾವು ವಿವರಿಸಬೇಕು. ಎರಡನೆಯದಾಗಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವಂತಹ ನಿಟ್ಟಿನಲ್ಲಿ ಸ್ವಯಂ ನಿವೃತ್ತಿ ನಿರ್ಧಾರವನ್ನು ಪುನರ್ ವಿಮರ್ಶೆ ಮಾಡಬಹುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈಗ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಮಾರುಕಟ್ಟೆಯನ್ನು ಮುಚ್ಚಬೇಕು ಎಂದು ತೀರ್ಮಾನವಾಗಿ ಅಲ್ಲಿ ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಕೆಲವರು ಹೊರಟು ಹೋಗಿದ್ದಾರೆ. ಇನ್ನು ಕೆಲವರು ಯಾರು ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಹೋಗಿಲ್ಲ ಅಂತಹವರಿಗೆ ಯಾವ ರೀತಿ ಪುನರ್‌ವಸತಿ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಲಿಕ್ಕೆ ಒಂದು 4–5 ಜನ ಉಳಿದಿದ್ದಾರೆ. ನಾನು ಭರವಸೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ ನಾನು ಅದನ್ನು ಗಮನಿಸುತ್ತೇನೆ. ಇನ್ನು ಎರಡನೆಯದಾಗಿ ಈ ಪಾರದರ್ಶಕ ಕಾಯ್ದೆ ಬಂದ ಮೇಲೆ ಈ ಸಂಸ್ಥೆಯ ಕೆಲಸ ಬಹಳ ಕಡಿಮೆ ಆಯಿತು. ಆದ್ದರಿಂದ ಅದನ್ನು ಮುಚ್ಚುವುದಕ್ಕೆ ಹಿಂದೆ ಜವಾಬ್ದಾರಿಯನ್ನು ತೆಗೆದು ಕೊಂಡಿದ್ದಾರೆ. ಮತ್ತೆ ಅದನ್ನು ಮರು ಪರಿಶೀಲನೆ ಮಾಡುವುದಕ್ಕೆ ಕಷ್ಟವಾಗಬಹುದು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ರಾಜ್ಯದ ಸಣ್ಣ ಕೈಗಾರಿಕೆಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಅವುಗಳಿಗೆ ದೇಶಿಯ ಮಾರುಕಟ್ಟೆ ಮತ್ತು ವಿದೇಶಿ ಮಾರುಕಟ್ಟೆ ಒದಗಿಸುವಂತಹ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ? ಮತ್ತೆ ಕಡ್ಡಾಯವಾಗಿ ಸರ್ಕಾರೀ ಸಂಸ್ಥೆಗಳು ಮತ್ತು ಅನುದಾನಿತ ಸಂಸ್ಥೆಗಳು ಕರ್ನಾಟಕ ರಾಜ್ಯದ ಸಣ್ಣ ಕೈಗಾರಿಕಾ ಉತ್ಪನ್ನಗಳನ್ನು ಕಡ್ಡಾಯವಾಗಿ ಖರೀದಿಸಬೇಕೆಂದು ಆದೇಶ ಮಾಡಲು ಸಾಧ್ಯವೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಇದು ಪ್ರತ್ಯೇಕವಾದ ಪ್ರಶ್ನೆ ಆಗುತ್ತದೆ. ಮಾನ್ಯ ಸದಸ್ಯರು ಬೇರೆ ರೀತಿಯಲ್ಲಿ ಕಳುಹಿಸಿದರೆ ನಾನು ಸಮಂಜಸವಾದ ಉತ್ತರ ಕೊಡುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈ ನಿಗಮವನ್ನು ಮುಚ್ಚುವಂತಹ ಸಂದರ್ಭದಲ್ಲಿ ಏನು ಸರ್ಕಾರಿ ಆಜ್ಞೆ ಆಯಿತು ಅದರಲ್ಲಿ ಒಂದು ಷರತ್ತು ಇತ್ತು. ನಿಗಮ ಅಧಿಕಾರಿ, ನೌಕರರ ಸೇವೆಯನ್ನು ರಾಜ್ಯ ಸರ್ಕಾರದ ಇತರ ಸಂಸ್ಥೆಗಳಲ್ಲಿ ವಿಲೀನಗೊಳಿಸಲು ಆ ಸಂಸ್ಥೆಗಳೊಂದಿಗೆ ವ್ಯವಹರಿಸಲು ಮಾಡಲು ಕ್ರಮ ಕೈಗೊಳ್ಳಬೇಕು ಎನ್ನುವುದು. ಅದು ಆದ ಮೇಲೆ ಇದೆ. 11–01–2002ನೇ ಇಸವಿಯಲ್ಲಿ ತಾವು ಏನು ಆಜ್ಞೆ ಮಾಡಿತು ಅದರಲ್ಲಿ ಇದೆ. ಮತ್ತು ಹಿಂದಿನ ಮುಖ್ಯಮಂತ್ರಿಗಳು ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿದರು. ಅದಕ್ಕೆ ತಾವು ಇದನ್ನು ಪುನರ್‌ಪರಿಶೀಲನೆ ಮಾಡಿ ಈ ಆಜ್ಞೆ ಪ್ರಕಾರ ಅವರಿಗೆ ಬೇರೆ ಇನ್ನಿತರೆ ಸರ್ಕಾರಿ ಸಂಸ್ಥೆಗಳಿಗೆ ವಿಲೀನಗೊಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಾನು ಕೈಗಾರಿಕೆಗಳನ್ನು ಪುನರ್‌ವಸತಿ ಮಾಡಬೇಕು. ಕೈಗಾರಿಕಾ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ನೌಕರರನ್ನು ಪುನರ್‌ವಸತಿ ಮಾಡಬೇಕು. ಇದು ಇರುವುದು ಪ್ರಶ್ನೆ. ಮಾನ್ಯ ಜಗದೀಶ ಶೆಟ್ಟರ್‌ರವರು ಸುಮಾರು ಮುಕ್ಕಾಲು ಗಂಟೆ ವಾದ ಮಾಡಿದರು ಆ ಸಂದರ್ಭದಲ್ಲಿ ನಾನು ಆ ಕಡೆ ಅವರ ಪಕ್ಕದಲ್ಲಿಯೇ ಕುಳಿತುಕೊಂಡಿದ್ದೆ. ನಾನು ಪರಿಶೀಲನೆ ಮಾಡುತ್ತೇನೆ. I will examine it.